ಶಾಲಾ ನಾಯಕತ್ವ: ಬೋಧನೆ ಮತ್ತು ಕಲಿಕೆಗೆ ಮಾರ್ಗದರ್ಶನ

| ಕನ್ನಡ |
| --- |
| ಹಿಂದೆ ಶಿಕ್ಷಕರು ಹೆಚ್ಚಾಗಿ ಬೋಧನಾ ವಿಧಾನದ ಮೂಲಕ ಕಲಿಸುತ್ತಿದ್ದರು.<br>ಬೋಧನಾ ಶಿಕ್ಷಣ ವಿಧಾನ ಪರಿಚಯವಾದಾಗ, ನಾವು ಮಕ್ಕಳನ್ನು ಗುಂಪುಗಳಾಗಿ ವಿಭಜಿಸಿದೆವು ಅವರೆಲ್ಲಾ ಅಲ್ಲಿ ಒಟ್ಟಾಗಿ ಕುಳಿತು ತಮ್ಮ ಕಲಿಕೆಯನ್ನು ಪ್ರಸ್ತುತ ಪಡಿಸುತ್ತಿದ್ದರು. ನಾನು ಸಹ board ಮೇಲೆ ವಿಷಯಗಳನ್ನು ವಿವರಿಸಲು ಮಕ್ಕಳನ್ನು ಪ್ರೋತ್ಸಾಹಿಸಲು ಈ ವಿಧಾನವನ್ನು ಉತ್ತೇಜಿಸುತ್ತೇನೆ.<br>ಅವರು ತಮ್ಮದೇ ಗುಂಪನ್ನು ರಚಿಸಿ board ಮೇಲೆ ಪ್ರಸ್ತುತಪಡಿಸುತ್ತಿದ್ದರು. ಪ್ರತಿಯೊಬ್ಬ ವಿದ್ಯಾರ್ಥಿಯೂ ತಮ್ಮ ಅಭಿಪ್ರಾಯವನ್ನು ಪ್ರಸ್ತುತಪಡಿಸಲು ಅವಕಾಶ ಪಡೆಯಬೇಕೆನ್ನುವುದು ನನ್ನ ಗುರಿಯಾಗಿತ್ತು.<br>ಮಕ್ಕಳು ಸಂಕೋಚ ಪಡಬಾರದು, ಅಥವಾ ಸುಮ್ಮನೆ ಕುಳಿತಿರಬಾರದು.<br>ನಾವು ತರಗತಿಯಲ್ಲಿ ಬೋಧನಾ ವಿಧಾನ ಬಯಸುವುದಿಲ್ಲ, ಆದರೆ ಬದಲಾಗಿ ನಾವು ಮಕ್ಕಳೇ ಪ್ರಸ್ತುತ ಪಡಿಸುವುದನ್ನು ನೋಡಲು ಬಯಸುತ್ತೇವೆ.<br>ವಿಷಯದ ಕುರಿತು ಅವರು ಏನು ಅರ್ಥಮಾಡಿಕೊಂಡಿದ್ದಾರೋ, ಅದನ್ನು ಅವರು board ಮೇಲೆ ವಿವರಿಸಬೇಕು ಮತ್ತು ವಿಷಯವನ್ನು ಪ್ರಸ್ತುತ ಪಡಿಸಬೇಕು.<br>ನಾವು ಶಿಕ್ಷಕರನ್ನು ಅವರ ಪಠ್ಯಕ್ರಮ ಪೂರ್ಣಗೊಳಿಸಿದ್ದಾರೆಯೇ, ಮತ್ತು ಮಕ್ಕಳು ಕಲಿತಿದ್ದಾರೆಯೇ ಎಂದು ಕೇಳಿದೆವು. ನಾನು ಸಹ ಮಕ್ಕಳಲ್ಲಿ ಒಬ್ಬಳಾಗಿ ಅವರಿಗೆ ಶಿಕ್ಷಕರು ಹೇಳಿದ್ದು ಅರ್ಥವಾಗಿದೆಯೇ ಎಂದು ತಿಳಿದುಕೊಳ್ಳುತೇನೆ.<br>ನಾನು ಎರಡೂ ಕಡೆಯಿಂದ ನಿಜವಾಗಿ ಏನಾಗುತ್ತಿದೆ ಎಂದು ತಿಳಿಯಲು ಪ್ರಯತ್ನಿಸುತ್ತೇನೆ.<br>ಶಿಕ್ಷಕರು ಮಕ್ಕಳಿಗೆ ಸರಿಯಾಗಿ ವಿವರಿಸಿದ್ದಾರೆಯೆ ಹಾಗೂ ಅವರಿಗೆ ಹೆಚ್ಚಿನ ವಿವರಣೆ ಅಗತ್ಯವಿದೆಯೇ ಎಂದು ಅವರನ್ನು ಕೇಳುತ್ತೇನೆ. ಶಿಕ್ಷಕರು ಹೆಚ್ಚು ವಿವರಿಸಿದ್ದರೆ, ನಾನು ಅವರನ್ನು ಆಕ್ಷೇಪಿಸುವುದಿಲ್ಲ. |